ಓ. ಎಸ್. ನಂ. 214-2017

**PW**-2

ಶ್ರೀಶೈಲ ಬಿರಾದಾರ

ದಿನಾಂಕಃ 23-06-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ. ವಿ.ಆರ್.ಎಚ್ ವಕೀಲರಿಂದಃ

1.. ನಾನು 37 ವರ್ಷ ಪೇಪರ ಮಿಲ್‌ನಲ್ಲಿ ಕೆಲಸ ಮಾಡಿ ನಿವೃತ್ತಿಯಾಗಿರುತ್ತೇನೆ. ನನಗೆ ಯಾವುದೇ ವ್ಯವಹಾರದ ಕಾಗದ ಪತ್ರಗಳ ಬಗ್ಗೆ ಮಾಹಿತಿ ಇದೆ. ನನನಗೆ ಜಮೀನು ಖರೀದಿಸಿದ ಅನುಭವ ಇದೆ. ಅದೇ ರೀತಿ ದಾಂಡೇಲಿಯಲ್ಲಿಯೂ ಸಹ ಸಾಕಷ್ಟು ವ್ಯವಹಾರಗಳನ್ನು ಮಾಡಿಸಿದ್ದೇನೆ. ನನಗೆ ಜನತಾದಳ ಪಕ್ಷದಲ್ಲಿ ರಾಜಕೀಯವಾಗಿ ಕೆಲಸ ಮಾಡಿದ್ದೇನೆ ಎಂದರೆ ಸರಿ. ಅದೇ ರೀತಿ ವಾದಿಯ ಗಂಡನೂ ಸಹ ಪೇಪರ ಮೀಲನಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಜನತಾದಳ ಪಕ್ಷದಲ್ಲಿ ರಾಜಕೀಯವಾಗಿ ಸಕ್ರಿಯವಾಗಿದ್ದು, ನಾಯಕರಾಗಿದ್ದರು ಎಂದರೆ ಸರಿ. ನನಗೆ ವಾದಿಯ ಗಂಡನವರ ಪರಿಚಯ ಪೇಪರ ಮಿಲನಲ್ಲಿ ಕೆಲಸ ಮಾಡುವಾಗ ಆಗಿರುತ್ತದೆ.

2. ನಾನು ನನ್ನ ಹೆಂಡಿತಿಯ ಹೆಸರಿನಲ್ಲಿ ಬಡ್ಡಿ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ರೀತಿಯ ವ್ಯವಹಾರದ ಕಾಗದ ಪತ್ರಗಳಲ್ಲಿ ಪ್ರತಿ ಪುಟಗಳಿಗೆ ಎಲ್ಲಾ ಪಕ್ಷಗಾರರು ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

3. ನಾನು ಸಾಕ್ಷಿದಾರರನ್ನಾಗಿ ಸಹಿ ಮಾಡಿದ್ದೇನೆ ಎನ್ನಲಾದ ಮನೆಯ ಖರೀದಿ ಕರಾರು ಪತ್ರಕ್ಕೆ ಎಲ್ಲಾ ಪುಟಗಳಲ್ಲಿ ಖರೀದಿದಾರರು ಮತ್ತು ಮಾರಾಟಗಾರರು ಸಹಿ ಮಾಡಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ನನಗೆ ಗೊತ್ತಿಲ್ಲ, ನಾನು ಮಾತ್ರ ಸಹಿ ಮಾಡಿದ್ದು ಗೊತ್ತು ಎಂದು ನುಡಿಯುತ್ತಾರೆ. ನೀವು ಸದರಿ ಖರೀದಿ ಕರಾರು ಪತ್ರಕ್ಕೆ ಸಹಿ ಮಾಡುವ ಮುನ್ನ ಅದನ್ನು ಓದಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಇನಾಂದಾರರು ಓದಿ ಹೇಳಿರುತ್ತಾರೆ, ಆದರೆ ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಸದರಿ ಖರೀದಿ ಕರಾರು

ಪತ್ರದಲ್ಲಿ ಮನೆ ಕೊಂಡಿದ್ದು, ಮಾರಾಟ ಮಾಡಿದ್ದು, 19,000 ರೂ. ಸಾವಿರಕ್ಕೆ ಮಾರಾಟವಾಗಿದ್ದು ಓಡಿ ಹೇಳಿರುತ್ತಾರೆ. ಸದರಿ ಖರೀದಿ ಕರಾರು ಪತ್ರದಲ್ಲಿ ಮನೆ ನಂಬರ ನಮೂದಿಸಿರಬಹುದು ನನಗೆ ನೆನಪಿಲ್ಲಾ.

4. ನಾನು ಸದರಿ ಖರೀದಿ ಕರಾರು ಪತ್ರಕ್ಕೆ ಸಾಕ್ಷಿದಾರರು ಎಂದು ಸಹಿ ಮಾಡುವ ಮುನ್ನ, ಸದರಿ ಮನೆಗೆ ಸಂಬಂಧಿಸಿದಂತೆ ಬೇರೆ ವ್ಯವಹಾರ ಆದ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸದರಿ ಖರೀದಿ ಕರಾರು ಪತ್ರದಲ್ಲಿ ಆ ವ್ಯವಹಾರ ಅಗುವ ಮುನ್ನ ಸದರಿ ಮನೆಗೆ ಸಂಬಂಧಿಸಿದಂತೆ ಇನ್ನೊಂದು ಖರೀದಿ ವ್ಯವಹಾರ ಆದ ಬಗ್ಗೆ ನಮೂದಿಸಿಲ್ಲ. ನಾನು ಸಹಿ ಮಾಡಿದ್ದೇನೆ ಎಂದು ಹೇಳುವ ಖರೀದಿ ಕರಾರು ಪತ್ರಕ್ಕೆ 5.00 ರೂಪಾಯಿ ಮುಖ ಬೆಲೆಯ 2 ಛಾಪ ಕಾಗದಗಳು ಇದ್ದವು. ಸದರಿ ಖರೀದಿ ಕರಾರು ಪತ್ರ 3 ಪುಟಗಳನ್ನು ಹೊಂದಿರುತ್ತದೆ. ಸದರಿ ಖರೀದಿ ಕರಾರು ಪತ್ರವನ್ನು ಸಂಜೆ 5.00 ರಿಂದ ಸುಮಾರು 7.00 ಗಂಟೆಯವರೆಗೆ ಕೈ ಬರಹದಲ್ಲಿ ಬರೆಯಲಾಗಿರುತ್ತದೆ. ಸದರಿ ಖರೀದಿ ಕರಾರು ಪತ್ರಕ್ಕೆ 9 ಜನ ಸಹಿ ಮಾಡಿರುತ್ತಾರೆ. ಸದರಿ ಖರೀದಿ ಕರಾರು ಪತ್ರಕ್ಕೆ ಇನಾಂದಾರರು ದಸ್ತೂರು ಮತ್ತು ಸಾಕ್ಷಿದಾರರು ಎಂದು ಎರಡು ಸಹಿ ಮಾಡಿದ್ದಾರೆ.

5. ಸದರಿ ಖರೀದಿ ಕರಾರು ಪತ್ರ ಆಗುವ ಮುನ್ನ 14,000 ರೂ ಹಣವನ್ನು ಯಾವಾಗ ಯಾರು ಎಲ್ಲಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. 14,000 ರೂ ಹಣವನ್ನು ನೀಡಲಾಗಿದೆ ಎಂದು ಖರೀದಿ ಕರಾರು ಪತ್ರ ಮಾಡುವ ದಿನವೇ ನನಗೆ ಗೊತ್ತಾಗಿರುತ್ತದೆ. ಉಳಿದ 4,000 ರೂ ಹಣವನ್ನು ಎಷ್ಟು ದಿನಗಳ ಒಳಗೆ ಕೊಡಬೇಕೆಂದು ಮಾತುಕತೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ನಿಮ್ಮನ್ನು ಈ ದಾವೆಯಲ್ಲಿ ಈಗ ಸಾಕ್ಷಿ ಮಾಡಿಸುವ ಮುನ್ನ ನಿಮ್ಮನ್ನು ಕೇಳಿ ವಾದಿ ಸಾಕ್ಷಿ ಮಾಡಿಸಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ನನಗೆ ಗೊತ್ತಿಲ್ಲ. ನನಗೆ ನ್ಯಾಯಾಲಯದಿಂದ ನೋಟೀಸ ಬಂದ ಕಾರಣ ನಾನು ಬಂದಿರುತ್ತೇನೆ. ನನ್ನನ್ನು ಯಾರು ಸಾಕ್ಷಿ ನುಡಿಯಲು ಕೇಳಿಲ್ಲ ಎಂದು ನುಡಿಯುತ್ತಾರೆ.

6. ನ್ಯಾಯಾಲಯದಿಂದ ನೋಟೀಸ ಬಂದ ನಂತರ ನಾನು ವಾದಿ, ವಾದಿಯ ಮಕ್ಕಳು ಹಾಗೂ ವಾದಿಯ ಗಂಡನನ್ನು ಭೇಟಿಯಾಗಿ ನೋಟೀಸ ಬಂದ ಮಾಹಿತಿ ತಿಳಿಸಿ ನಾನು ಏನು ಸಾಕ್ಷಿ ಹೇಳಬೇಕೆಂದು ಕೇಳಿದಿರಾ

ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಯಾರನ್ನು ಭೇಟಿಯಾಗಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿದಿನ ವಾದಿಯ ಗಂಡನ ಜೊತೆಯಲ್ಲಿಯೇ ನ್ಯಾಯಾಲಯಕ್ಕೆ ಬಂದಿರುತ್ತೇನೆ ಅವರನ್ನು ಕೇಳಿಯೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಸಹಿ ಮಾಡಿದ್ದೇನೆ ಎನ್ನಲಾದ ಖರೀದಿ ಕರಾರು ಪತ್ರವನ್ನು ಪ್ರತಿವಾದಿಗೆ ಮೋಸ ಮಾಡಿ ಮಾಡಿಕೊಂಡ ಖರೀದಿ ಕರಾರು ಪತ್ರವಾಗಿದ್ದು, ಅದು ಸೃಷ್ಟಿತಾ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿ ಬೇರೆ ದಿನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರವೂ ಸೌದಾಗಾರ ಕಚೇರಿಯಲ್ಲಿ ಆಗಿಯೇ ಇಲ್ಲಾ, ಅದಕ್ಕೆ ಅದೇ ದಿನ ಸಾಕ್ಷಿದಾರರೆಂದು ಸಹಿ ಮಾಡಿಯೇ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯ ಮಗನ ವಿದ್ಯಾಭ್ಯಾಸಕ್ಕೆ ಹಣದ ಅಡಚಣೆ ಇದ್ದ ಕಾರಣ, ಅವರು ವಾದಿಯ ಹತ್ತಿರ ಹಣದ ಸಹಾಯ ಕೇಳಿದ್ದರಿಂದ ಅದನ್ನು ದುರಪಯೋಗ ಪಡಿಸಿಕೊಂಡು ನಾವೆಲ್ಲಾರು ಸೇರಿ ಸದರಿ ಖರೀದಿ ಕರಾರು ಪತ್ರವನ್ನು ಸೃಷ್ಟಸಿಕೊಂಡು ನಾನು ವಾದಿಯ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮಗ ಮತ್ತು ಹೆಂಡಿತಿಯ ಸಹಿ ಪಡೆಯುವಾಗ, ಅವರಿಗೆ ಸಾಲದ ವ್ಯವಹಾರವೆಂದು ಸುಳ್ಳು ಹೇಳಿ ನಾವು ಸದರಿ ಖರೀದಿ ಕರಾರು ಪತ್ರಕ್ಕೆ ಅವರ ಸಹಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಖರೀದಿ ಕರಾರು ಪತ್ರದ ವ್ಯವಹಾರ ಆಗಿಯೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**

**(ತೇಜಶ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**

ಪ್ರ.ದ.ನ್ಯಾ.ದಂ., ದಾಂಡೇಲಿ